ಪೀಸ್ಟ್‌ಗಳು ವೇಕೆಂಟ್ ಇವೆ. ಅಧಿಕಾರಿಗಳ ಜೊತೆ ಸಭೆ ನಡೆಸಬೇಕು, ಅವರಿಂದ ಮಾಹಿತಿ ತೆಗೆದುಕೊಳ್ಳಬೇಕು ಎಂದು ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಬಹಳಷ್ಟು ಪೋಸ್ಟ್‌ಗಳು ವೇಕೆಂಟ್ ಇದ್ದ ಕಾರಣ, ತಮಗೆ ಗೊತ್ತಿರುವ ಹಾಗೆ ಇತ್ತೀಚೆಗೆ 815 ಜನ ಡಾಕ್ಟರ್‌ಗಳನ್ನು ತೆಗೆದುಕೊಂಡರೂ, ಅವರ ಪೈಕಿ 615 ಮಂದಿ ಡಾಕ್ಟರ್‌ಗಳು ಮಾತ್ರ ಬಂದು ಕೆಲಸಕ್ಕೆ join ಆಗಿದ್ದಾರೆ, ಕೆಲವರು join ಆಗಿಲ್ಲ. 5,300 paramedical postಗಳನ್ನು ಇನ್ನು ಎರಡು ತಿಂಗಳಲ್ಲಿ ಭರ್ತಿ ಮಾಡುತ್ತೇವೆ. ಇನ್ನು ಯಾವ ರೀತಿಯಲ್ಲಿ ತಾವು ಸಲಹೆಗಳನ್ನು ಕೊಡುತ್ತೀರೋ, ಅವುಗಳನ್ನು ನಾನು ಸಂಪೂರ್ಣವಾಗಿ ತೆಗೆದುಕೊಂಡು, ತಮಗೆ ಸಮಾಧಾನ ಮತ್ತು ತೃಪ್ತಿ ತರುವಂಥ ಕೆಲಸವನ್ನು ನಾನು ಮಾಡಿಕೊಡುತ್ತೇನೆ.

ಶ್ರೀ ಎಂ.ಮಂಜು : Contract basis appointmentಅನ್ನು ತಾವು ನಿಲ್ಲಿಸಿದ್ದೀರಿ. ದಯವಿಟ್ಟು contract basis ಮೇಲೆ appointment ಮಾಡಿಕೊಳ್ಳಬೇಕು.

ಶ್ರೀ ಅಶೋಕ್ ಕಾಟ್ಟೆ : ದಯವಿಟ್ಟು ಡಾಕ್ಟರ್‌ಗಳ ಸಂಬಳವನ್ನಾದರೂ ಜಾಸ್ತಿ ಮಾಡಿ. ಇಲ್ಲದಿದ್ದರೆ ಡಾಕ್ಟರ್‌ಗಳ್ಯಾರೂ ಸರ್ಕಾರಿ ಆಸ್ಪತ್ರೆಗಳಿಗೆ ಬರುವುದಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹೀಗೆ ಕೇಳುತ್ತಾ ಹೋದರೆ ಆರೋಗ್ಯ ಇಲಾಖೆಯ ಬಗ್ಗೆಯೇ ಚರ್ಚೆ ಪ್ರಾರಂಭವಾಗುತ್ತದೆ. ಬಜೆಟ್ ಮೇಲೆ ಚರ್ಚೆ ಮಾಡುವಾಗ, ಆರೋಗ್ಯ ಇಲಾಖೆಯ ವಿಷಯ ಬಂದಾಗ ಆಗ ಚರ್ಚೆ ಮಾಡಿ. ಆರೋಗ್ಯ ಕವಚ ಯೋಜನೆ ಹೋಗಿ, ಈಗ ಪೂರ್ತಿ ಆರೋಗ್ಯ ಇಲಾಖೆಯ ಬಗ್ಗೆಯೇ ಚರ್ಚೆ ಚಾಲೂ ಆಯಿತು. ಈಗ ಮುಂದಿನ ಪ್ರಶ್ನೆ, ಕೃಷ್ಣಪ್ಪನವರು ಪ್ರಶ್ನೆ ಕೇಳಬೇಕು.

ಕರ್ನಾಟಕ ವಿಧಾನ ಸಭೆ

7(32) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ)

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ತುಮಕೂರು ಜಿಲ್ಲೆ ತುರುವೇಕೆರೆ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಅನುದಾನವನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಿಡುಗಡೆ ಮಾಡಲಾದ ಅನುದಾನ ಎಷ್ಟು?

ಹೌದು.

ಪ್ರಸಕ್ತ ಸಾಲಿನಲ್ಲಿ ರೂ.16.49 ಲಕ್ಷಗಳ ಅನುದಾನ ಒದಗಿಸಲಾಗಿದೆ. ಇದುವರೆವಿಗೂ ಈ ಕಾಮಗಾರಿಗೆ ರೂ.95.73 ಲಕ್ಷಗಳು ವೆಚ್ಚವಾಗಿದೆ.

ಆ. ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಕೈಗೊಂಡ ಗುತ್ತಿಗೆದಾರರ ಹೆಸರು ಮತ್ತು ವಿಳಾಸವನ್ನು ನೀಡುವುದು.

ಮೆ: ನಾಗಾರ್ಜುನ ಕನ್ಸ್‌ಟ್ರಕ್ಷನ್ ಕಂಪನಿ ಲಿಮಿಟೆಡ್, ನಂ.301, ಬಟಾವಿಯಾ ಛೇಂಬರ್ಸ್, ಕುಮಾರ ಕೃಪ ರಸ್ತೆ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು.

ಇ. ಮೂಲ ಗುತ್ತಿಗೆದಾರರು ಉಪಗುತ್ತಿಗೆ ನೀಡಿರುವುದರಿಂದ ಕಳಪೆ ಕಾಮಗಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು:

ಇಲ್ಲ.

ಉದ್ಭವಿಸುವುದಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ : ಉತ್ತರ ಬಂದಿದೆ. ಆದರೆ ನನ್ನ ಪ್ರಶ್ನೆಗೂ, ಇವರ ಉತ್ತರಕ್ಕೂ ಅಸಂಬದ್ಧವಾದಂಥ ವಿಚಾರಧಾರೆ ಇದ್ದಂತಿದೆ. ಏತಕ್ಕೆ ನಾನು ಇದನ್ನು ಹೇಳುವುದಕ್ಕೆ ಬಯಸುತ್ತೇನೆ ಎಂದರೆ, ತುರುವೇಕರೆ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೇರಿಸಿ ಸುಮಾರು ಎರಡೂವರೆ ವರ್ಷಗಳಾಗಿವೆ. ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಕೊಟ್ಟಿರತಕ್ಕಂಥ ನಾಗಾರ್ಜುನ ಕನ್ಸ್‌ಟ್ರಕ್ಷನ್ ಕಂಪನಿಯವರು, ಇದನ್ನು package ಆಧಾರದಲ್ಲಿ ತೆಗೆದುಕೊಂಡಿದ್ದು, ಬೇರೆಯವರಿಗೆ ಅಂದರೆ ಸೊಮಣ್ಣ ಎನ್ನುವವರಿಗೆ sub let ಮಾಡಿದ್ದಾರೆ. ಅವರು ಮತ್ತೊಬ್ಬರಿಗೆ sub let ಮಾಡಿದ್ದಾರೆ. ಹೀಗಾಗಿ ಅಲ್ಲಿ ಕಳಪೆ ಕಾಮಗಾರಿಯಾಗಿದ್ದು, ಸುಮಾರು ಒಂದೂವರೆ ವರ್ಷದಿಂದ ಆಸ್ಪತ್ರೆ ಕಟ್ಟಡದ ಕಾಮಗಾರಿ ನಿಂತು ಹೋಗಿದೆ. ಆ ತಾಲ್ಲೂಕಿನ ಜನ 2–3 ಸಾರಿ ಇದರ ಬಗ್ಗೆ ಪ್ರತಿಭಟನೆಯನ್ನು ಮಾಡಿದ್ದಾರೆ. 2008ನೇ ಇಸವಿಗೆ ಇದು ಮುಗಿಯಬೇಕಾಗಿತ್ತು, ಇನ್ನೂ ಮುಗಿದಿಲ್ಲ. ಕಾಮಗಾರಿಯನ್ನು ಯಾರಿಗೋ ಒಬ್ಬರಿಗೆ package systemನಲ್ಲಿ ಕೊಟ್ಟು, ಅವರು ಮತ್ತೆ 2–3 ಜನರಿಗೆ sub let ಕೊಡುವ system ಆದರೆ ಖಂಡಿತವಾಗಿ ಒಳ್ಳೆಯ ಕೆಲಸವಾಗುವುದಿಲ್ಲ. ಅಲ್ಲಿ 100% ಕಳಪೆ ಕಾಮಗಾರಿಯಾಗಿದೆ. ಇದರ ಬಗ್ಗೆ Chief Engineer ರವರು ಬಂದು ಆಗಲೇ report ಅನ್ನು ಮಾಡಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆದರೆ ಇವರು ಉತ್ತರದಲ್ಲಿ ಸಂಬಂಧವಿಲ್ಲದ ವಿಚಾರವಾಗಿದೆ. ಸೂಕ್ತ enquity ಮಾಡಿ, repair ಮಾಡಿ, ಒಳ್ಳೆಯ building ಮಾಡಿ ಎಂದು ನಾನು ಈಗಾಗಲೇ ಎರಡು ಪತ್ರಗಳನ್ನು ಬರೆದಿದ್ದೇನೆ. ಆದರೆ ಇದುವರೆಗೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಬಹಳಷ್ಟು ಸಮಸ್ಯೆ ಇದೆ. ದಯಮಾಡಿ ಅದರ ಬಗ್ಗೆ ಸೂಕ್ತವಾದಂಥ ನಿಲುವು ತೆಗೆದುಕೊಳ್ಳಬೇಕು. Sub ler ಕೊಡುವ system ಅನ್ನು ಪೂರ್ಣವಾಗಿ ತೆಗೆದು ಹಾಕಬೇಕು. ಬೆಂಗಳೂರಿನವರ್ಯಾರೋ ತೆಗೆದುಕೊಂಡು, ಅವರು ಅದನ್ನು ತುಮಕೂರಿನವರಿಗೆ ಕೊಟ್ಟು, ಅವರು ತುರುವೇಕೆರೆಯವರಿಗೆ ಕೊಟ್ಟು ಮಾಡುವುದು ಬರೀ

commission agencyಯ ವ್ಯಾಪಾರವಾಗುತ್ತದೆಯೇ ಹೊರತು ಅಲ್ಲಿ ಒಳ್ಳೆಯ ಕೆಲಸವಾಗಲಿಕ್ಕಿಲ್ಲ. ದಯಮಾಡಿ ಅದಕ್ಕೆ ಕಡಿವಾಣ ಹಾಕಬೇಕು. ಇಂಥ sub let ಗಳನ್ನು ಮಾಡುವವರನ್ನು black list ನಲ್ಲಿ ಹಾಕಬೇಕು ಎನ್ನುವುದು ನನ್ನ ಒತ್ತಾಯ. ಕಳಪೆ ಕಾಮಗಾರಿಯ ಬಗ್ಗೆ ದಯಮಾಡಿ enquiry ಆಗಬೇಕು. ಮಾನ್ಯ ಸಚಿವರಲ್ಲಿ ಮತ್ತೊಂದು ವಿಚಾರವನ್ನು ಹೇಳುವುದೇನೆಂದರೆ, ನಮ್ಮ ಆಸ್ಪತ್ರೆಗೆ 7 ಡಾಕ್ಟರ್‌ಗಳ ಪೋಸ್ಟ್‌ಗಳನ್ನು ಮಂಜೂರು ಮಾಡಿದ್ದು, ಅದರಲ್ಲಿ 5 ಖಾಲಿ ಇದ್ದು, ಇಬ್ಬರು ಮಾತ್ರ ಕೆಲಸ ಮಾಡುತ್ತಿದ್ದಾರೆ. 100 ಹಾಸಿಗೆಗಳ ಆಸ್ಪತ್ರೆಯಲ್ಲಿ ಕೇವಲ ಇಬ್ಬರು ಡಾಕ್ಟರ್‌ಗಳಿದ್ದಾರೆ. ನರ್ಸ್‌ಗಳ 15 ಪೋಸ್ಟ್‌ಗಳನ್ನು ಮಂಜೂರು ಮಾಡಿದ್ದರೂ ಕೇವಲ 8 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಎಲ್ಲ ಹುದ್ದೆಗಳನ್ನೂ ಭರ್ತಿ ಮಾಡಬೇಕು ಎಂದು ಮನವಿ ಮಾಡುತ್ತಿದ್ದೇನೆ. ಕಳಪೆ ಕಾಮಗಾರಿಯ ಬಗ್ಗೆ ಪೂರ್ಣವಾದಂಥ enquiry ಯನ್ನು ಮಾಡಬೇಕು. ಇದರ ಜೊತೆಗೆ, ನಾನು ತಮಗೆ ಒಂದು ಪತ್ರವನ್ನು ಬರೆದಿದ್ದೆ. ಮಾವಿನಕೆರೆ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಕೆಲಸ ಮಾಡತಕ್ಕಂಥ ಡಾಕ್ಟರ್ ಸುಮಾರು 5 ವರ್ಷಗಳಿಂದ ಇಲ್ಲಿಯವರೆಗೆ ಯಾವುದೇ ಒಂದು ಡೆಲಿವರಿಯನ್ನೂ ಮಾಡಿಲ್ಲ, ಯಾವುದೇ ಒಂದು ಪೋಸ್ಟ್ ಮಾರ್ಟಂಅನ್ನೂ ಮಾಡಿಲ್ಲ ಅವರು ಸರಿಯಾಗಿ ಆಸ್ಪತ್ರೆಗೂ ಬರುವುದಿಲ್ಲ. ಆದರೆ ಅವರಿಗೆ ಸರ್ಕಾರ ಸಂಬಳವನ್ನಂತೂ ಕೊಡುತ್ತಿದೆ. ಇದರ ಬಗ್ಗೆ enquiry ಮಾಡಿ ಎಂದು ನಾನು ಸರ್ಕಾರಕ್ಕೆ ಪತ್ರ ಬರೆದೆ. ಸರ್ಕಾರದಿಂದ ಸನ್ಮಾನ್ಯ ಸಚಿವರು enquiry ಮಾಡಿ ಎಂದು ಆದೇಶ ಮಾಡಿದರೆ ಆ paper ವಿಧಾನಸೌಧದಲ್ಲಿ ಸಿಗುತ್ತಿಲ್ಲ. ಅದು ಎಲ್ಲಿ ಹೋಯಿತೆಂದು ಹುಡುಕಬೇಕು. ನಾನು ಆರು ಸಲ ಹೋಗಿದ್ದೇನೆ. ಇದುವರೆಗೂ ಸಹ ಆ paper ಸಿಗಲಿಲ್ಲ. ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಸಭಾಧ್ಯಕ್ಷರೆ, 50 bedded ನಿಂದ 100 bedded ಗಳ ಆಸ್ಪತ್ರೆಯನ್ನು ಸುಮಾರು 2005ನೇ ಇಸವಿಯಲ್ಲಿ ಮೇಲ್ದರ್ಜೆಗೇರಿಸಲಾಗಿದೆ. ಸುಮಾರು 2 ಕೋಟಿ 26 ಲಕ್ಷ ರೂಪಾಯಿಗಳ sanction ಆದ ನಂತರ ಸುಮಾರು 17 ಲಕ್ಷ ರೂಪಾಯಿಗಳ ಅನುದಾನವನ್ನು ಅವರಿಗೆ sanction ಮೂಲಕ ಒದಗಿಸಲಾಗಿದೆ. ಇನ್ನು, ಕಳಪೆ ಕಾಮಗಾರಿ ಆಗಿದೆ, Nagarjuna Constructions ನವರು sub contract ಕೊಟ್ಟಿದ್ದಾರೆನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಬೇಕಾದರೆ, ಈ ಅಧಿವೇಶನ ಮುಗಿದ ನಂತರ ನಾನೇ ಖುದ್ದಾಗಿ ಅಲ್ಲಿಗೆ ಬೇಟಿ ನೀಡಿ, ಅಧಿಕಾರಿಗಳ ಜೊತೆ ಪರಿಶೀಲನೆ ಮಾಡಿ, ಅಲ್ಲಿ ಏನಾದರೂ ಕಳಪೆ ಕಾಮಗಾರಿ ಆಗಿದ್ದರೆ, ತಕ್ಷಣ ಅವರ ಮೇಲೆ

ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇನೆಂದು ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ತಮಗೆ ತಿಳಿಸಲು ಬಯಸುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಆಯಿತು.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ,. . .

ಅಧ್ಯಕ್ಷರು : No. ಬಾಲಕೃಷ್ಣರವರಿಗೆ ಅವಕಾಶವಿಲ್ಲ. ಕೃಷ್ಣಪ್ಪನವರೆ, ತಾವು ಬೇರೆ ಏನಾದರೂ ಕೇಳುವುದಿದ್ದರೆ ಕೇಳಿ. ಬಾಲಕೃಷ್ಣರವರೆ, ಇದು ತುರುವೇಕೆರೆ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯವಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾನು general ಆಗಿ ಕೇಳುತ್ತೇನೆ.

ಅಧ್ಯಕ್ಷರು : ಇಲ್ಲ, general ಆಗಿ ಕೇಳುವುದಕ್ಕೆ ಅವಕಾಶವಿಲ್ಲ. No, no, ಆರೋಗ್ಯ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ನೀವು ಮಾತನಾಡಬಹುದು. ಇದು ತುರುವೇಕೆರೆಗೆ ಸೀಮಿತವಾಗಿರುವ ಪ್ರಶ್ನೆಯಾಗಿರುವುದರಿಂದ, I will not allow you.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು : ಇಲ್ಲ, ಇದು record ಗೆ ಹೋಗುವುದಿಲ್ಲ. ಇದು ತುರುವೇಕೆರೆಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಹಾಗಾಗಿ, No, I will not allow. ನಿಮಗೆ ಅವಕಾಶ ಕೊಟ್ಟರೆ ಬೇರೆ ಸದಸ್ಯರು ಸಹ ಕೇಳುತ್ತಾರೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತಾಲ್ಕೆರೆಯಲ್ಲಿ ಒಂದು Primary Health Centre ಅನ್ನು sanction ಮಾಡಿ ಅದಕ್ಕೆ ಸುಮಾರು 55 ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಸ್ಥಳದ ಸಲುವಾಗಿ ಅದಕ್ಕೆ 2003ರಲ್ಲಿಯೇ ಜಮೀನನ್ನು ಮಂಜೂರು ಮಾಡಿದ್ದಾರೆ. ಅದಕ್ಕೆ ದುಡ್ಡನ್ನೂ ಕೊಟ್ಟಿದ್ದಾರೆ. ಆದರೆ, ಸನ್ಮಾನ್ಯ ಸಚಿವರ ಕಛೇರಿಯಿಂದ ಒಂದು ಆದೇಶ ಬಂದಿದೆ. ಇದು ನಮ್ಮ ಕಾಲದಲ್ಲಿ ಅಲ್ಲ, ಹಿಂದೆ ಆವಂಥ ಒಂದು ಸರ್ಕಾರಿ ಆದೇಶ. ಸರ್ವೆ ನಂ.25ರಲ್ಲಿ 3 ಎಕರೆ ಜಮೀನನ್ನು...

ಅಧ್ಯಕ್ಷರು : ಕೃಷ್ಣಪ್ಪನವರೆ, please, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ ತುರುವೇಕೆರೆ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ನೀವು ಕೇಳಿದ್ದ ಪ್ರಶ್ನೆಯಲ್ಲಿ ಈ subject ಬಂದಿಲ್ಲ. ಒಂದೇ ಪ್ರಶ್ನೆಯಲ್ಲಿ ನಿಮ್ಮ ಇಡೀ ಕ್ಷೇತ್ರದ ಎಲ್ಲಾ ಸಮಸ್ಯೆಯನ್ನು ಮುಗಿಸುವುದಕ್ಕಾಗುವುದಿಲ್ಲ. I will not allow.

ಶ್ರೀ ಎಂ.ಟಿ.ಕೃಷ್ಣಪ್ಪ : ನಾನು ಒಂದೇ ಒಂದು ನಿಮಿಷ ಕೇಳಿಬಿಡುತ್ತೇನೆ. ದಯಮಾಡಿ, ಆ ಒಂದು particular ಪ್ರಶ್ನೆಯನ್ನು ಕೇಳಿಬಿಡುತ್ತೇನೆ.

ಅಧ್ಯಕ್ಷರು : ನೀವು ಮೊದಲು ಏನು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ಸೀಮಿತವಾಗಿ ಮಾತ್ರ ಉಪ ಪ್ರಶ್ನೆ ಕೇಳಿ. ಇಲ್ಲದಿದ್ದರೆ, I will not allow you. I will go to next question.

ಶ್ರೀ ಎಂ.ಟಿ.ಕೃಷ್ಣಪ್ಪ : ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ಈ ಪ್ರಶ್ನೆ ಬಹಳ ಮೂಲಭೂತವಾದದ್ದು. ಆ fund ವಾಪಸ್ಸು ಹೊಗುತ್ತಿದೆ. You have not utilized that fund. ಆ fund utilize ಆಗಬೇಕು. ಅದು ವಾಪಸ್ಸು ಹೋಗುತ್ತಿದೆ.

ಅಧ್ಯಕ್ಷರು : ಒಂದೇ ಪ್ರಶ್ನೆಯಲ್ಲಿ ಎಲ್ಲವನ್ನೂ ಕೇಳುವುದಕ್ಕೆ ಅವಕಾಶವಿಲ್ಲ. ಬೇಕಾದರೆ ಬೇರೆ ಪ್ರಶ್ನೆ ಕಳುಹಿಸಿಕೊಡಿ.

ಶ್ರೀ ಎಂ.ಟಿ.ಕೃಷ್ಣಪ್ಪ : why are you wasting Government fund? You are not implementing.

ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ ವಸತಿಶಾಲೆ ಕಟ್ಟಡ ನಿರ್ಮಾಣ

8(124) ಶ್ರೀ ಹೆಚ್.ಎಸ್.ಮಹದೇವ ಪ್ರಸಾದ (ಗುಂಡ್ಲು ಪೇಟೆ)
ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಗುಂಡ್ಲುಪೇಟೆ ಹಂಗಳ ಗ್ರಾಮದ ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ ವಸತಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯರ ಬೇಡಿಕೆ ಇದೆಯೇ;

ಬೇಡಿಕೆ ಬಂದಿರುತ್ತದೆ.

ಆ) ಕಟ್ಟಡ ನಿರ್ಮಾಣಕ್ಕೆ ಅವಶ್ಯವಾದ ನಿವೇಶವನ್ನು ಇಲಾಖೆಗೆ ಹಸ್ತಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶಾಲಾ ಸಂಕೀರ್ಣ ನಿರ್ಮಿಸಲು ಜಿಲ್ಲಾಧಿಕಾರಿ, ಚಾಮರಾಜನಗರ ಇವರು ದಿನಾಂಕ: 04-02-2009ರ ಆದೇಶದಂತೆ ಹಂಗಳ ಹೋಬಳಿ ಮಗುವಿನಹಳ್ಳಿ (ಮೇಲ್ಕಾಮನಹಳ್ಳಿ) ಗ್ರಾಮದಲ್ಲಿ 8 ಎಕರೆ ಜಮೀನನ್ನು ಮಂಜೂರು ಮಾಡಿರುತ್ತಾರೆ.

ಇ) ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣದ ಕೆಲಸವನ್ನು 2009-10ನೇ ಸಾಲಿನಲ್ಲಿ ಕೈಗೊಳ್ಳಲು ಸರ್ಕಾರದ ತೀರ್ಮಾನವೇನು?

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ದಿನಾಂಕ: 01.07.2009 ರಂದು ಟೆಂಡರ್‌ನ್ನು ಕರೆಯಲಾಗಿದ್ದು, ಟೆಂಡರ್ ಸ್ವೀಕರಿಸಲು ದಿ:03.08.09 ಕೊನೆಯ ದಿನಾಂಕವಾಗಿರುತ್ತದೆ. ಟಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾರ್ಯದೇಶ ನೀಡಲಾಗುವುದು.